ಕುವೆಂಪು ವಿಶ್ವವಿದ್ಯಾಲಯ :

1. ಪ್ರೊ: ಜಿ. ಎಂ. ಬಸವರಾಜ್	25-2-88	31-3-89
2. ಬಿ. ಜಿ. ಮಹೇಶ್ (ಪ್ರಭಾರ)	1-4-89	8-8-89
3. ಎಂ. ಎಸ್. ರವಿಶಂಕರ್ ಕೆ.ಎ.ಎಸ್	4-8-89	24-4-90
4. ಐ. ಹೆಚ್. ಪೂಜಾರ್ (ಪ್ರಭಾರ)	25-4-90	3-6-90
5. ಪ್ರೊ: ಹೆಚ್. ಜಿ. ಲಕ್ಕಪ್ಪಗೌಡ	4-6-90	31-12-93
6. ಪ್ರೊ: ಕೆ. ವಿ. ರಘುನಾಥನ್ (ಪ್ರಭಾರ)	1-1-94	6-2-94
7. ಪ್ರೊ: ಕೆ. ಎನ್. ವೆಂಕಟಕೃಷ್ಣರಾವ್	7-2-94	ಇಂದಿನವರೆಗೆ.

ವಿಷಯ :- ಮಾಲೂರು ತಾಲ್ಲೂಕಿನ ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 997 (1924)

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಲೂರು ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು? ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಸದರಿ ಕಾಲೇಜುಗಳಲ್ಲಿ ಉಪನ್ಯಾಸಕರ ಸಂಖ್ಯೆ ಎಷ್ಟು?

ಇ) ಉಪಾಧ್ಯಾಯರ ಕೊರತೆಯಿಂದ ಪಾಠಪ್ರವಚನಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಖಾಲಿ ಇರುವ ಹುದ್ದೆಗಳನ್ನು ಎಷ್ಟು ಕಾಲಾವಧಿಯಲ್ಲಿ ಭರ್ತಿ ಮಾಡಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) 5

559

ಆ) ಮಂಜೂರಾಗಿರುವ ಒಟ್ಟು ಹುದ್ದೆಗಳು : 48

ಕಾರ್ಯ ನಿರ್ವಹಿಸುತ್ತಿರುವ
ಉಪನ್ಯಾಸಕರುಗಳ ಸಂಖ್ಯೆ : 29

ಇ) ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ 864 ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಲು ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಆಯೋಗದಿಂದ ಆಯ್ಕೆಪಟ್ಟಿ ಬಂದ ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಔಷಧಿಗಳಿಗಾಗಿ ರಾಜ್ಯ ಸರ್ಕಾರಿ ಹಣ ನಿಗದಿಪಡಿಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 998 (1085)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಆರೋಗ್ಯ ಕೇಂದ್ರ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳಲ್ಲಿ ಔಷಧಿಗಳಿಗಾಗಿ ರಾಜ್ಯ ಸರ್ಕಾರ ಎಷ್ಟು ಹಣ ನಿಗಧಿಪಡಿಸಿದೆ, ಎಷ್ಟು ಬಿಡುಗಡೆ ಮಾಡಿದೆ.

ಆ) ವೈದ್ಯರ ನೇಮಕಾತಿ ಕಡಿಮೆಯಿರುವಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕಾತಿ ವ್ಯವಸ್ಥೆ ಇದೆಯೆ?

ಇ) ಈ ಕೇಂದ್ರಗಳಲ್ಲಿ ಆಯುರ್ವೇದ ವೈದ್ಯರ ನೇಮಕಾತಿ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಈ) ಇತ್ತೀಚೆಗೆ ಸರ್ಕಾರದಿಂದ ಸಮುದಾಯ ಪ್ರಶಸ್ತಿ ಯೋಜನೆ ಕಾರ್ಯಕ್ರಮ ಮತ್ತು ಅದರ ಕಾರ್ಯವ್ಯಾಪ್ತಿ ಏನು?

ಉ) ಗ್ರಾಮಾಂತರ ಪ್ರದೇಶಗಳಲ್ಲಿ ನಕಲಿ ವೈದ್ಯರು ಅಥವಾ ವೈದ್ಯಕೀಯ ಅರ್ಹತೆ ಪೂರ್ಣಗೊಳಿಸಿದೆ ಚಿಕಿತ್ಸಾಲಯಗಳನ್ನು ಮತ್ತು ಚಿಕಿತ್ಸೆ ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಇದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ನಿಯಂತ್ರಣದಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಘಟಕಗಳು ಮತ್ತು ಇತರ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಸರಬರಾಜು ಆಗುವ ಔಷಧ ಮತ್ತು ರಾಸಾಯನಿಕಗಳಿಗೆ ಆಯವ್ಯಯವನ್ನು ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ಸ್‌ನಲ್ಲಿ ಹಣ ಒದಗಿಸಿದ್ದು, ಬೇಡಿಕೆಯನ್ನನುಸರಿಸಿ ಕ್ರಮ ತೆಗೆದುಕೊಳ್ಳುವರು.

ಆ) ಹೌದು. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರು ಇಲ್ಲದ ಕಡೆ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಲಾಗುತ್ತಿದೆ.